# ಶ್ರೇಷ್ಟ ರೂಪಾಂತರ

## (ರೋಮಾಪುರ 6)

### *ಅತಿ ಮಹತ್ವವಾದ ರೂಪಾಂತಪದ ಅನುಭವಗಳೊಡನೆ ರೂಪಾಂತರವಾದ ಜೀವನ ಪ್ರಾರಂಭವಾಗುತ್ತದೆ ...*

ಅದ್ಭುತವಾದ ರೂಪಾಂತರಗಳ ಸಾಧ್ಯತೆಯು ಇಂದಿನ ದಿನಗಳಲ್ಲಿ ಟರ್ಬೈನ್‌ನ ಗಾಲಿಗಳ ಮೇಲೆ ನೀರು ಬೀಳುವಂಥದು ನೀರಿನ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುವದಾಗಿದೆ. ಪರಿಮಾಣವನ್ನು ಬರಿಕಣ್ಣಿನಿಂದ ನೋಡುವುದಾದರೆ ಬಲುಚಿಕ್ಕದಾಗಿ ಕಾಣುವಂಥದ್ದಾಗಿದ್ದು, ಇವು ಅಣ್ವಸ್ತ್ರ ಶಸ್ತ್ರಾಸ್ತ್ರಗಳಾಗಿ ಪರಿವರ್ತಿತವಾಗಿ ಸಂಪೂರ್ಣ ಪಟ್ಟಣಗಳನ್ನೇ ನಾಶಮಾಡಬಲ್ಲವು. ಒಬ್ಬ ಸ್ತ್ರೀಯು, ತನ್ನ ಕೂದಲಿಗೆ ಬಣ್ಣಹಚ್ಚುವದಕ್ಕಾಗಿ ಬ್ಯೂಟಿ ಪಾರ್ಲರ್‌ಗೆ ಹೋಗುವ ಹಾಗೆ, ತನ್ನ ಮೂಗನ್ನು ನೆಟ್ಟಗೆ ಮಾಡಿಸಿಕೊಳ್ಳುವುದಕ್ಕಾಗಿ ವೈದ್ಯರ ಬಳಿ ಹೋಗುವಂತೆ, ಹೊಸಹಲ್ಲಿಗಾಗಿ ದಂತವೈದ್ಯರ ಬಳಿ, ತನ್ನ ಹೊಸ ದೇಹ ಸಿರಿಯನ್ನು ಹೊಂದಲು ತೂಕ ಕಳೆದುಕೊಳ್ಳುವುದಕ್ಕಾಗಿರುವ ಅಂಗಡಿಗೆ ಹೋಗುವ ಹಾಗೆ, ಹೀಗೆ ಇವೆಲ್ಲ ಎಂಥ ದೊಡ್ಡ ರೂಪಾಂತರಕ್ಕೆ ನಡೆಸುತ್ತವೆಯಲ್ಲಾ!

ಆದರೆ ರೋಮಾಪುರ 6 ಇವೆಲ್ಲವುಗಳಿಗಿಂತ ಮಿಗಿಲಾದ ಅದ್ಭುತವಾದ ರೂಪಾಂತರದ ಬಗೆಗೆ ಮಾತನಾಡುವುದಾಗಿದೆ. ಒಬ್ಬ ವ್ಯಕ್ತಿಯು ಕ್ರೈಸ್ತನಾದಾಗ ಶ್ರೇಷ್ಟವಾದ ರೂಪಾಂತರವು ಜರಗುತ್ತದೆ. ಆತನು ಕ್ರೈಸ್ತನಾಗುವ ಮೊದಲು ಆತನು ದೇವರ ಕೃಪೆಯ ಹೊರಗೆ ಇರುತ್ತಾನೆ; ಕ್ರೈಸ್ತನಾದಂತೆ ಆತನು ದೇವರ ಮಗುವಾಗುತ್ತಾನೆ. ಮೊದಲು ಆತನು ಆತ್ಮೀಕ ಆಶೀರ್ವಾದಗಳಿಂದ ಆತನು ವಿಹೀತನಾಗುವನು; ನಂತರ, ಆತನು ಕ್ರಿಸ್ತನಲ್ಲಿ ಆತ್ಮೀಕ ಆಶೀರ್ವಾದಗಳನ್ನು ಪಡೆದು ಕೊಳ್ಳುವನು. ಮೊದಲು ಆತನು ನಿತ್ಯದಂಡನೆಗೆ ಒಪ್ಪಿಸಲ್ಪಟ್ಟವನು ಆಗಿದ್ದರೆ; ನಂತರ ಆತನಿಗೆ ನಿತ್ಯಜೀವವು ಕೊಡಲ್ಪಡುವದು. ಈ ಶ್ರೇಷ್ಟ ಪರಿವರ್ತನೆಯ ಬಲು ಅದ್ಭುತವಾದಂಥಹ ಕಣಪಟ್ಟೆಯು ಆಗಿದ್ದು, ಆತನು ತನ್ನಷ್ಟಕ್ಕೆ ತಾನೇ ಸಹಾಯಿಸಲು ಅಸ ಮರ್ಥನಾಗುವ ವಾಸ್ತವಸೆ ಇದ್ದಾಗಲೂ ಇದು ಎಲ್ಲವೂ ಸಂಭವಿಸುವದು; ಆತನು ರಕ್ಷಣೆಯನ್ನು ದೇವರ ಕೊಡುಗೆಯಾಗಿ ಪಡೆದುಕೊಳ್ಳುವನು!

ಒಬ್ಬನು ಕ್ರೈಸ್ತನಾಗುವಾಗ, ಬದಲಾವಣೆಯ ಆಗಾಧತೆಯು ಅವನಲ್ಲಿ ಕಂಡುಬರುತ್ತದೆ, ಪಾಪಿಯಾದ ಆ ಮನುಷ್ಯನು, ಪರಲೋಕಕ್ಕೆ ಹೊಂದಿಕೊಳ್ಳುವಂತೆ ತನ್ನ ಪಾಪದ ಸ್ವಭಾವವನ್ನು ಬದಲಾಸಿಕೊಳ್ಳಲೇಬೇಕು ಎಂದು ಅರ್ಥೈಸಿಕೊಳ್ಳುವದು ನಮಗೆ ಅವಶ್ಯವಿದೆ. ಮೂರ್ಖ, ಪಾಪಿ, ಅವಿಧೇಯನಾದ ಸೈತಾನನ ಮಗನಾಗಿರುವ ಒಬ್ಬನು, ಪ್ರೀತಿಪೂರ್ವನೂ, ನೀತಿವಂತನೂ ಮತ್ತು ದೀನತೆಯಲ್ಲಿ ದೇವರ ಮಗನಾಗಿ ಪರಿವರ್ತಿತನಾಗಲೇಬೇಕು. ದೇವರ ಕೃಪೆಯಿಂದಲೇ, ಈ ಪರಿವರ್ತನೆಯು ಖಂಡಿತ ವಾಗಿ ಕಾರ್ಯಗತವಾಗುತ್ತದೆ; ಇದರಿಂದಲೇ ಮತಾಭಿಮಾನಿಯೆನಿಸಿದ ಸೀಮೋನ ಮತ್ತು ಸುಂಕದವನಾದ ಮತ್ತಾಯ ಇವರುಗಳು ಸಮರ್ಪಣಾಭಾವದ ಶಿಷ್ಯರಾಗಲು ಸಾಧ್ಯವಾಯಿತು; ಹಿಂಸ್ರಕನಾದ ಸೌಲನು ಬೋಧಕನಾದ ಪೌಲನಾಗುವಂತಾಯಿತು; "ಸಿಡಿಲಿನ ಮರಿ" ಎನಿಸಿದ ಯೋಹಾನನು ಪ್ರೀತಿಯ ಅಪೋಸ್ತಲ ನಾಗುವಂತಾಯಿತು. ಕೊರಿಂಥದವರಲ್ಲಿ ಕೆಲವರು, "... ಅನ್ಯಾಯಗಾರರು, ... ಜಾರರು, ವಿಗ್ರಹಾರಾಧಕರೂ, ವ್ಯಭಿಚಾರಿಗಳು, ಮಿಟರೂ ಪುರುಷಗಾಮಿಗಳೂ, ಕಳ್ಳರೂ, ಲೋಭಿಗಳೂ, ಕುಡಿಕರೂ, ಬೈಯುವವರೂ ಸುಲುಕೊಳ್ಳುವವರೂ ... ಆಗಿದ್ದವರು ತೊಳೆಯಲ್ಪಟ್ಟವರೂ

ಮತ್ತು ನೀತಿವಂತರು ಎಂದು ನಿರ್ಣಯಿಸಲ್ಪಟ್ಟವರೂ ಆದರು" (1 ಕೊರಿಂಥ 6:9-11) ಮತ್ತು ಅವರು "ದೇವರ ಸಭೆ' ಮತ್ತು "ಸಂತರು" (1 ಕೊರಿಂಥ 1:2) ಎಂದು ಕರೆಯಲ್ಪಟ್ಟರು.

ರೋಮಾಪುರ 6 ಈ ಪರಿವರ್ತನೆಯ ಮೂರು ಸತ್ಯಗಳನ್ನು ನಮಗೆ ತಿಳಿಸುತ್ತದೆ.

## ಈ ಪರಿವರ್ತನೆ ಎಂದರೇನು?

ರೋಮಾಪುರ 6 ಇದರ ಹರವನ್ನು ತಿಳಿಸುವುದಾಗಿದೆ.

*ನಾವು ಪಾಪದಲ್ಲಿ ಇದ್ದೆವು, ಆದರೆ ಈಗ ನಾವು ಪಾಪದ ಪಾಲಿಗೆ ಸತ್ತವರಾಗಿದ್ದೇವೆ.* ಪೌಲನು, "ಕೃಪೆಯು ಹೆಚ್ಚಲಿ ಎಂದು ಪಾಪದಲ್ಲಿ ನಾವು ಇರಬೇಕೋ?" ಎಂದು ಕೇಳುತ್ತಾನೆ ಮತ್ತು ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ? ಎಂದು ಅದಕ್ಕೆ ಜೋಡಿಸುತ್ತಾನೆ (ರೋಮಾಪುರ 6:1, 2). ವಚನ 11 ಸಹ, "ಪಾಪದ ಪಾಲಿಗೆ ಸತ್ತವರಾಗಿದ್ದೇವೆ ಎಂದು" ನಾವು ಎಣಿಸಿಕೊಳ್ಳಬೇಕೆ ಎಂದು ಹೇಳುತ್ತದೆ.

*ನಾವು ಪಾಪಕ್ಕೆ ದಾಸರಾಗಿದ್ದೇವೆ, ಆದರೆ ಈಗ ಅದರಿಂದ ನಾವು ಸ್ವತಂತ್ರ್ಯರಾಗಿದ್ದೇವೆ.* ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಪೌಲನು ಹೇಳುತ್ತಾ, "ಪಾಪಧೀನವಾದ ಸ್ವಭಾವವು ನಾಶವಾಗಿ ನಾವು ಇನ್ನು ಪಾಪದ ವಶದಲ್ಲಿ ಇರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ" (ರೋಮಾಪುರ 6:6, 7) ಎನ್ನುತ್ತಾನೆ. ನಾವು ರಕ್ಷಿಸಲ್ಪಟ್ಟಿದ್ದೇವೆ ಯಾಕೆಂದರೆ, "ನಾವು ಇನ್ನು ಪಾಪಕ್ಕೆ ದಾಸರಾಗಿರುವುದಿಲ್ಲ." ನಂತರ ಪೌಲನು ರೋಮಾಪುರದವರಿಗೆ, "ಅವರು ಮುಂಚೆ ಪಾಪಕ್ಕೆ ದಾಸರಾಗಿದ್ದರು, ಆದರೆ ಈಗ ಅವರು ಪಾಪದಿಂದ ಬಿಡುಗಡೆಗೊಂಡಿದ್ದಾರೆ" ಎಂದು ಅವರಿಗೆ ಹೇಳುತ್ತಾನೆ (ರೋಮಾಪುರ 6:17, 18; ಹೋಲಿಸಿ 6:20, 22).

ನಾವು ರಕ್ಷಿಸ್ಪಟ್ಟಿದ್ದಾದರೆ "ನಾವು ಮುಕ್ತರಾಗಿದ್ದೇವೆ ಎಂದು ರೋಮಾಪುರ 6 ಹೇಳಿದರೂ ಕೂಡಾ (ಹೋಲಿಸಿ ಯೋಹಾನ 8:32), ನಾವು ಪ್ರತಿಯೊಂದರಿಂದ ಸ್ವತಂತ್ರ್ಯರಾಗಿದ್ದೇವೆ ಎಂದಾಗುವುದಿಲ್ಲ. ಬದಲಾಗಿ ನಾವು ನೀತಿವಂತಿಕೆಯ ದಾಸರಾಗುತ್ತೇವೆ (ರೋಮಾಪುರ 6:18) ಮತ್ತು ದೇವರ ದಾಸರಾಗುತ್ತೇವೆ (ರೋಮಾಪುರ 6:22). ವಾಸ್ತವವಾಗಿ ಸಂಪೂರ್ಣ ಸ್ವಾತಂತ್ರ್ಯದ ಬಗೆಗೆ ಅಲ್ಲಿ ಯಾವ ಸಂಗತಿಗಳು ಇಲ್ಲ. ಮನುಷ್ಯರು ಸ್ವಾತಂತ್ರ್ಯ ಮತ್ತು ದಾಸತ್ವದ ಮಧ್ಯವನ್ನು ಆರಿಸಿ ಕೊಳ್ಳಲಾರರು. ಬದಲಾಗಿ ಅವರು ತಾವು ಯಾವುದಕ್ಕೆ ದಾಸರಾಗುತ್ತಾರೋ ಅದಕ್ಕೆ ತಮ್ಮನ್ನು ಆಯ್ದುಕೊಳ್ಳುತ್ತಾರೆ. ಭೋಗಿಯಾದ ಮನುಷ್ಯನು ತನ್ನ ಆತ್ಮ ಸಂತೋಷದ ನೈಜ ಸೆರೆಯಾಳಾಗಿದ್ದು ತನ್ನನ್ನು ಸಂಪೂರ್ಣವಾದ ಸ್ವತಂತ್ರ್ಯ ಮನುಷ್ಯ ಎಂಬ ಉನ್ಮತ್ತತೆಯಲ್ಲಿ ಮತ್ತು ಕಲ್ಪನೆಯಲ್ಲಿ ತನ್ನನ್ನು ತಾನು ಇರಿಸಿಕೊಳ್ಳುವವನಾಗಿರುತ್ತಾನೆ.

ಆದರೆ ಕೆಲವರು ಆಶ್ಚರ್ಯಪಡಬಹುದು: ಆಗ ಕ್ರೈಸ್ತತ್ವವನ್ನು ಹೊಂದಿದ್ದರೆ ಅದರಿಂದಾಗುವ ಪ್ರಯೋಜನಗಳು ಏನು? ನೀನು ಇನ್ನೂ ದಾಸನಾಗಿಯೇ ಇರುವುದಾಗಿದ್ದರೆ ಯಾಕೆ ಕ್ರೈಸ್ತನಾಗಬೇಕು? ಪೌಲನು ಆ ಪ್ರಶ್ನೆಗಳನ್ನು ನಿರೀಕ್ಷಿಸಿದ್ದನು ಮತ್ತು ಅದಕ್ಕೆ ಉತ್ತರಿಸಿದ್ದಾನೆ:

> ನೀವು ಪಾಪಕ್ಕೆ ದಾಸರಾಗಿದ್ದಾಗ ನೀತಿಯ ಹಂಗಿನವರಾಗಿದ್ದಿಲ್ಲ. ಆದರೆ ನೀವು ಆಗ ಮಾಡಿದ ಕೃತ್ಯಗಳಿಂದ ನಿಮಗುಂಟಾದ ಫಲವೇನು? ಈಗ ಅವುಗಳ ವಿಷಯದಲ್ಲಿ ನಿಮಗೆ ನಾಚಿಕೆಯುಂಟಷ್ಟೆ. ಕಡೆಗೆ ಅವುಗಳಿಂದ ಬರುವದು ಮರಣವಲ್ಲವೇ. ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾಗುವುದರಿಂದ ಪರಿಶುದ್ಧರಾಗುವುದೇ ನಿಮಗೆ ಫಲ; ಕಡೆಗೆ ದೊರೆಯುವಂಥದ್ದು ನಿತ್ಯಜೀವ. ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವವು (ರೋಮಾಪುರ 6:20-23; ಹೋಲಿಸಿ 6:16).

ಕ್ರಿಸ್ತನನ್ನು ಹಿಂಬಾಲಿಸುವುದನ್ನು ಆರಿಸಿಕೊಳ್ಳುವಲ್ಲಿ, ಒಬ್ಬನು ಬಂಧಗಳಿಂದ ಅಥವಾ ಅಧಿಕಾರಗಳಿಂದ ನಿಶ್ಚಿತವಾದ ಬಿಡುಗಡೆಯನ್ನು ಆರಿಸಿಕೊಳ್ಳುವುದಿಲ್ಲ; ಬದಲಾಗಿ, ಆತನು ದೇವರಿಗೆ ದಾಸನಾಗಿರುವುದನ್ನು ಆರಿಸಿಕೊಳ್ಳುವವನಾಗಿದ್ದಾನೆ. ಅಂಥ ಆಯ್ಕೆಯನ್ನು ಯಾಕೆ ಮಾಡಿಕೊಳ್ಳುತ್ತಾನೆ? ಬಹುಮಾನದ ಸಲುವಾಗಿಯೇ! ನೀತಿವಂತಿಕೆಗೆ ದಾಸನಾಗಿರುವುದರ ಪರಿಣಾಮವು, ಒಬ್ಬನು ನಿತ್ಯಜೀವವನ್ನು ಪಡೆಯುವುದೇ ಆಗಿದೆ. ಆತನು ಪಾಪದ ದಾಸನಾಗಿಯೇ ಇದ್ದುದಾದರೆ, ಆತನು ಮರಣವನ್ನಲ್ಲದೇ ಏನನ್ನೂ ಪಡೆಯುವುದಿಲ್ಲ! ನೀನು ಯಾವುದರ ದಾಸನಾಗಿರುವುದನ್ನು ಬಯಸುವವನಾಗಿದ್ದೀ?

ನೂರಕ್ಕೂ ಹೆಚ್ಚು ವರ್ಷಗಳ ಹಿಂದೆ ಅಬ್ರಹಾಂ ಲಿಂಕನ್ ದಾಸತ್ವದಿಂದ ಮುಕ್ತಿಯ ಘೋಷಣೆಯನ್ನು ಸಮಾಚಾರವನ್ನು ಕೊಟ್ಟನು. ಹೆಚ್ಚು ಕಡಿಮೆ ಎರಡು ಸಾವಿರ ವರುಷಗಳ ಹಿಂದೆ ಯೇಸು ಮನುಷ್ಯರೆಲ್ಲರಿಗೆ ಪಾಪದಿಂದ ಮುಕ್ತಿಯ ಅವಕಾಶವನ್ನು ಕೊಡವ ಮೂಲಕ ಆತ್ಮೀಕ ಮುಕ್ತಿಯ ಘೋಷಣೆಯ ಸಮಾಚಾರವನ್ನು ಕೊಟ್ಟನು!

*ನಾವು ನಮ್ಮ ಪೂರ್ವ ಸ್ವಭಾವವನ್ನು ಹೊಂದಿದವರೇ ಆಗಿದ್ದೇವೆ, ಆದರೆ ಈಗ ನಾವು ಹೊಸ ಜೀವನದಲ್ಲಿ ಜೀವಿಸುವವರಾಗಿದ್ದೇವೆ.* ಪೌಲನು ಇದನ್ನೇ ಸೂಚಿಸುತ್ತಾ: "ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ" (ರೋಮಾಪುರ 6:6), ಎನ್ನುತ್ತಾ ಅದಕ್ಕಿಂತ ಮುಂಚೆ "ಹೊಸಬರಾಗಿ ನಡೆದುಕೊಳ್ಳಬೇಕು" (ರೋಮಾಪುರ 6:4) ಆಗಲೇ ನಾವು ರಕ್ಷಿಸಲ್ಪಡುತ್ತೇವೆ ಎನ್ನುತ್ತಾನೆ.

## ಈ ಪರಿವರ್ತನೆಯು ಹೇಗೆ ಸಂಭವಿಸಿತು?

ರೋಮಾಪುರ 6ರಲ್ಲಿ ಯಾವ ಸಾಧನೆಗಳ ಮೂಲಕ ಇದು ನೆರವೇರಿತು ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ.

*ನಾವು ಕೃಪೆಯಿಂತ ರಕ್ಷಿಸಲ್ಪಟ್ಟೆವು:* "ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವವವು" (ರೋಮಾಪುರ 6:23). ರಕ್ಷಣೆಯು ವರವಾಗಿದೆ; ಆದ್ದರಿಂದ ರಕ್ಷಣೆಯು ಕೃಪೆಯಿಂದಲೇ ಆಗಿದೆ (ರೋಮಾಪುರ 3:24ನ್ನು ಸಹ ನೋಡಿರಿ.)

*ನಾವು ಯೇಸು ಕ್ರಿಸ್ತನ ಮೂಲಕ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ.* ದೇವರು ನಮ್ಮ ಕರ್ತನಾದ "ಕ್ರಿಸ್ತ ಯೇಸುವಿನಲ್ಲಿ" ನಿತ್ಯಜೀವವನ್ನು ಕೊಡುವವನಾಗಿದ್ದಾನೆ (ರೋಮಾಪುರ 6:23). "ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಸತ್ತಾಗಲೂ ದೇವರು ನಮ್ಮ ಮೇಲೆ ತನ್ನ ಪ್ರೀತಿಯನ್ನು ಪ್ರಾಯೋಗಿಸುವವನಾಗಿದ್ದಾನೆ. ಅದಕ್ಕಿಂತ ಹೆಚ್ಚಾಗಿ, ಆತನ ರಕ್ತದ ಮೂಲಕ ನ್ಯಾಯತೀರ್ಪಿಕೆಗಾಗುವುದರಿಂದ, ನಾವು ದೇವರಿಂದ ಉಂಟಾಗುವ ಕೋಪದಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದು" ಎಂದು ಪೌಲನು ಹೇಳುತ್ತಾನೆ. ನಾವು ರಕ್ಷಣೆ ಹೊಂದುವುದಕ್ಕೆ ಯೋಗ್ಯರಾಗಿದ್ದೇವೆಯೋ ಇಲ್ಲವೋ ಎಂಬುದರವರೆಗೆ ಕಾಯುವುದಿಲ್ಲ ಎಂಬುದನ್ನು ಗಮನಿಸಿರಿ; ಬದಲಾಗಿ, "ನಾವು ಇನ್ನೂ ಪಾಪಿಗಳಾಗಿಯೇ ಇದ್ದಾಗಲೇ" ಕ್ರಿಸ್ತನನ್ನು ನಮಗಾಗಿ ಮರಣಹೊಂದಲು ಒಪ್ಪಿಕೊಟ್ಟನು.

ಹೀಗೆ ನಮ್ಮ ರಕ್ಷಣೆಯು ಯೇಸು ಕ್ರಿಸ್ತನ ಮೂಲಕ ಪರಿಪೂರ್ಣಗೊಳ್ಳುವದು. 6:11 ಹೇಳುವುದೇನೆಂದರೆ, "ಅದೇ ಪ್ರಕಾರ ನೀವು ಸಹ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ." ಕ್ರಿಸ್ತನ ಹೊರತಾಗಿ ರಕ್ಷಣೆಯು ಇಲ್ಲ.

*ನಮ್ಮ ರಕ್ಷಣೆಯು ನಂಬಿಕೆಯಿಂದ ಸ್ವೀಕೃತವಾಗಿದೆ:* "ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರೆಂದು ಎಣಿಸಲ್ಪಡುತ್ತೇನೆ" (ರೋಮಾಪುರ 5:1). ಎಫೆಸ 2:8ರಲ್ಲಿ: "ನಂಬಿಕೆಯ ಮೂಲಕ ಕೃಪೆಯಿಂದಲೇ ನಾವು ರಕ್ಷಣೆ ಹೊಂದುವವರಾಗಿದ್ದೇವೆ"

ಎಂದು ಓದುತ್ತೇವೆ.

ಆದರೆ ರೋಮಾಪುರ 6 ಸಹ ನಾವು ವಿಧೇಯತೆಯ ಮೂಲಕವೇ ನಂಬಿಕೆಯಿಂದ ರಕ್ಷಣೆಯನ್ನು ಹೊಂದುವೆವು ಎಂದು ಸ್ಪಷ್ಟಪಡಿಸುತ್ತದೆ. ರೋಮಾಪುರ 6:17, 18ನ್ನು ಗಮನಿಸಿ:

> ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಪೂರ್ವಕ ಅಧೀನರಾದುದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದುದರಿಂದಲೂ ದೇವರಿಗೆ ಸ್ತೋತ್ರವಾಗಲಿ.

ರಕ್ಷಣೆಯು ವಿಧೇಯತೆಯ ನಂತರವೇ ಬರುತ್ತದೆ ಎಂದು ಈ ವಚನಗಳು ಕಲಿಸುತ್ತವೆ. "ನೀವು ಪಾಪಕ್ಕೆ ದಾಸರಾಗಿದ್ದೀರಿ," ಆದರೆ "ನಿಮಗೆ ಕಲಿಸಲ್ಪಟ್ಟ ಬೋಧನೆಗೆ ... ನೀವು ಮನಪೂರ್ವಕ ಅಧೀನರಾದುದರಿಂದಲೂ" ಮತ್ತು "ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾಗುತ್ತೀರಿ" ಎಂದು ಪೌಲನು ಹೇಳುತ್ತಾನೆ. ಈ ಅನುಕ್ರಮವು ಹೇಗೆಂದರೆ: ಮೊದಲು ಪಾಪಕ್ಕೆ ದಾಸರಾಗಿರುವದು, ಎರಡನೆಯದಾಗಿ ಕಲಿಯುವುದಕ್ಕೆ ವಿಧೇಯರಾಗಿರುವದು; ಮೂರನೆಯದು, ಪಾಪದಿಂದ ದೂರವಿರಿಸುವದು, ನಾಲ್ಕನೆಯದಾಗಿ ನೀತಿಗೆ ದಾಸರಾಗಿರುವದು. ರೋಮಾನ್ನರು ನಂಬಿಕೆ ಮೂಲಕ ರಕ್ಷಿಸಲ್ಪಡುತ್ತಿದ್ದರು, ಆದರೆ ಅವರು ವಿಧೇಯರಾಗುವವರೆಗೆ ರಕ್ಷಿಸಲ್ಪಡಲಿಲ್ಲ; ಅವರು "ನಂಬಿಕೆಯೆಂಬ ವಿಧೇಯತ್ವದಿಂದ" (ರೋಮಾಪುರ 1:5; 16:26), "ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ರಕ್ಷಿಸಲ್ಪಟ್ಟರು" (ಗಲಾತ್ಯ 5:6).

ಅವರು ಯಾವುದಕ್ಕೆ ವಿಧೇಯರಾದರು? ರೋಮಾಪುರ 6:17 ಹೇಳುವಂತೆ ಅವರನ್ನು ಬಿಡುಗಡೆ ಮಾಡಿದಂಥಹ ಅವರು "ಕಲಿಸಿದ ಬೋಧನೆಗೆ" ವಿಧೆಯರಾದರು ("ತತ್ವಜ್ಞಾನದ ಒಂದು ರೀತಿ"; KJV). ಅದರ ಅರ್ಥವೇನು? ರೋಮಾಪುರ 6:3-5 ಅದಕ್ಕೆ ಉತ್ತರವನ್ನು ಕೊಡುತ್ತದೆ:

> ಕ್ರಿಸ್ತ ಯೇಸುವಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕಾಗಿ ದೀಕ್ಷಾಸ್ನಾನಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವೂ ಕೂಡಾ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸಾದೃಷ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶ್ಯವಾದ ಪುನರುತ್ಥಾನವನ್ನೂ ಹೊಂದು ಆತನಲ್ಲಿ ಐಕ್ಯವಾಗುವೆವು.

ಸುವಾರ್ತೆಯು ಕ್ರಿಸ್ತನ ಮರಣ, ಹೂಣುವಿಕೆ, ಮತ್ತು ಪುನರುತ್ಥಾನವನ್ನು ಚಿತ್ರಿಸುವುದಾಗಿದೆ ಪೌಲನು ಹೀಗೆ ಬರೆಯುತ್ತಾನೆ:

> ಸಹೋದರರೇ, ನಾನು ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ ತರುತ್ತೇನೆ. ನೀವು ಅದನ್ನು ಸ್ವೀಕರಿಸಿದಿರಿ, ಅದರಲ್ಲಿ ನಿಂತಿದ್ದೀರಿ. ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದೆನೋ ನೀವು ಅದನ್ನು ಘಟ್ಟಿಯಾಗಿ ಹಿಡುಕೊಂಡರೆ ಮತ್ತು ನಿಮ್ಮ ನಂಬಿಕೆಯು ನಿರಾಧಾರವಾಗದ ಪಕ್ಷಕ್ಕೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ. ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನೆಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ

ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು. ಕೇಫನಿಗೂ ಆ ಮೇಲೆ ಹನ್ನೆರಡು ಮಂದಿ ಅಪೊಸ್ತಲರಿಗೂ ಕಾಣಿಸಿಕೊಂಡನು (1 ಕೊರಿಂಥ 15:1-5).

ಸುವಾರ್ತೆಗಳಿಗೆ ವಿಧೇಯರಾಗಬೇಕು ಎಂದು ಸಹ ಹೊಸ ಒಡಂಬಡಿಕೆಯು ನಮಗೆ ತಿಳಿಸುವಂತದ್ದಾಗಿದೆ (2 ಥೆಸಲೋನಿಕ 1:8, 9; 1 ಪೇತ್ರ 4:17, 18; ರೋಮಾಪುರ 10:16).

ಕ್ರಿಸ್ತನ ಮರಣ, ಹೂಣುವಿಕೆ ಮತ್ತು ಪುನರುತ್ಥಾನವನ್ನು ಚಿತ್ರಿಸುವಂಥಹ ಸುವಾರ್ತೆಗೆ ಒಬ್ಬನು ಹೇಗೆ ವಿಧೇಯನಾಗಬೇಕು? ಅದಕ್ಕೆ ಉತ್ತರವು: ದೀಕ್ಷಸ್ನಾನ ಹೊಂದುವ ಮೂಲಕ! ನಮ್ಮ ದೀಕ್ಷಾಸ್ನಾನವು ಕ್ರಿಸ್ತನ ಮರಣ, ಹೂಣುವಿಕೆ, ಮತ್ತು ಪುನರುತ್ಥಾನಗಳ ಚಿತ್ರಣವಾಗಿದೆ. ಹೇಗೋ ಅದು ಅದಕ್ಕಿಂತಲೂ ಹೆಚ್ಚಿನದಾಗಿದೆ: ನಾವು ದೀಕ್ಷಾಸ್ನಾನ ಹೊಂದಿದಾಗ, ನಾವು ಕ್ರಿಸ್ತನ ಮರಣದದಲ್ಲಿ ದೀಕ್ಷಾಸ್ನಾನ ಹೊಂದಿರುತ್ತೇವೆ. ನಾವು ಕ್ರಿಸ್ತನೊಂದಿಗೆ ಹೂಣಲ್ಪಟ್ಟಿರುತ್ತೇವೆ; ಮತ್ತು ನಾವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುತ್ತೇವೆ. ಹೀಗೆ ನಾವು ದೀಕ್ಷಾಸ್ನಾನ ಹೊಂದಿದಾಗ, ನಾವು ಸುವಾರ್ತೆಗೆ ವಿಧೇಯರಾಗುತ್ತೇವೆ, ನಾವು ರಕ್ಷಿಸಲ್ಪಡುತ್ತೇವೆ ಇದು ನಂತರವೇ ಹೊರತು ಅದಕ್ಕಿಂತ ಮೊದಲು ಅಲ್ಲ. ದೀಕ್ಷಾಸ್ನಾನವು ರಕ್ಷಣೆಗೆ ಅತೀ ಅವಶ್ಯವಾಗಿದೆ. ರೋಮಾನ್ನರು ವಿಧೇಯರಾದ "ಕಲಿಸಲ್ಪಟ್ಟ ಬೋಧನೆಗೆ"ಯೂ ಕೂಡಾ ಈ ದೀಕ್ಷಾಸ್ನಾನದಲ್ಲಿ ಒಳಗೊಂಡಿರುತ್ತದೆ.

ಹೇಗೂ ಆಗಲಿ, ದೀಕ್ಷಾಸ್ನಾನವೊಂದೇ ರಕ್ಷಣೆಯನ್ನು ಕೊಡದು. ದೀಕ್ಷಾಸ್ನಾನದ ಫಲಿತಾಂಶವು ನಂಬಿಕೆಯಿಂದ ಬಂದುದಾಗಿರುತ್ತದೆ ಮತ್ತು ನಂಬಿಕೆಯಿಲ್ಲದೇ ಅದು ಅರ್ಥರಹಿತವಾದುದ್ದು ಆಗಿದೆ (ಕೊಲಸ್ಸೆ 2:12). ದೀಕ್ಷಾಸ್ನಾನ ಪಶ್ಚಾತ್ತಾಪ ಮತ್ತು ಪಶ್ಚಾತ್ತಪವಿಲ್ಲದೇ ಮತ್ತೇನಿಲ್ಲದರೆಡೆಗೆ ನಡೆಸುವುದಾಗಿದೆ (ಅಪೊಸ್ತಲರ ಕೃತ್ಯಗಳು 2:38; 17:30). ನಂಬಿಕೆಯಿಲ್ಲದ ದೀಕ್ಷಾಸ್ನಾನ ಮತ್ತು ಪಶ್ಚಾತ್ತಾಪಗಳು ರಕ್ಷಿಸಲಾರವು. ಆದರೆ ನಾವು ದೀಕ್ಷಾಸ್ನಾನಕ್ಕೆ ಒಪ್ಪದೇ ಸುವಾರ್ತೆಗೆ ವಿಧೇಯರಾಗಿರುವುದಾದರೆ ನಂಬಿಕೆಯಾಗಲೀ ಮತ್ತು ಪಶ್ಚಾತ್ತಾಪವಾಗಲೂ ರಕ್ಷಿಸುವವುಗಳಾಗಿವೆ.

## ಈ ರೂಪಾಂತರದ ಪರಿಣಾಮಗಳೇನು?

ರೋಮಾಪುರ 6 ಅದರಿಂದಾಗುವ ಪರಿಣಾಮಗಳನ್ನು *ಪ್ರಸ್ತುತಪಡಿಸುತ್ತದೆ.*

*ರೂಪಾಂತರವು ಹೊಸ ಜೀವಮದಲ್ಲಿ ಫಲವನ್ನು ತೋರಿಸುವುದಾಗಿದೆ.* ನಾವು "ಜೀವದೆಂದೆದ್ದು ಹೊಸದಾಗಿ" (ರೋಮಾಪುರ 6:4) ನಡೆಯುವವರಾಗಿರುತ್ತೇವೆ ಎಂದು ಪೌಲನು ಹೇಳುತ್ತಾನೆ, ಮತ್ತು ನಾವು ಪಾಪಕ್ಕೆ ಸತ್ತವರಾಗಿರುತ್ತೇವೆ ಆದರೆ ದೇವರಿಗಾಗಿ ಜೀವಿಸುವವರು ಆಗಿರುತ್ತೇವೆ (ರೋಮಾಪುರ 6:11). ಇದರ ವಿವಕ್ಷೆ ಎಂದರೆ ನಾವು ಹೊಸದಾಗಿ ಹುಟ್ಟಿದ ಕ್ರೈಸ್ತರಾದಾಗ ದೇವರ ಕುಟುಂಬದಲ್ಲಿನ ದೇವರ ಮಕ್ಕಳು ಆಗುತ್ತೇವೆ.

ಶ್ರೇಷ್ಟವಾದ ಪರಿವರ್ತನೆಯ ಪರಿಣಾಮವು-ಅಥವಾ ಬರಬೇಕಾದ ಫಲಿತಾಂಶವು - ಬದಲಾದ ಜೀವಿತದ ಇರುವುದಾಗಿದೆ. ಹೇಗೋ, ಕ್ರೈಸ್ತನ ಜೀವಿತವು ಬದಲಾಗುವದು ಆತನಿಗೆ ಬಿಟ್ಟದ್ದಾಗದೆ. ಹೀಗೆ ಕ್ರೈಸ್ತನ ಜೀವಿತವು ಏನೇ ಆಗಿರಲಿ ಅದು ಆತನನ್ನು ಬದಲಾಯಿಸುವುದಾಗಿದೆ.

ಈ ಅಧ್ಯಾಯದಲ್ಲಿ ಪೌಲನು ತನ್ನ ಕೇಳುಗರಿಗೆ ಆತನೇನು ಹೇಳುತ್ತಾನೆಂಬುದನ್ನು ಪರಿಗಣಿಸಬೇಕೆಂದು ಎರಡು ಖಂಡಿಸುವ ವಾದಗಳನ್ನು ಒದಗಿಸುವವನಾಗಿದ್ದಾನೆ.

ಆತನು ನೀರಿಕ್ಷಿಸುವ ಒಂದು ವಾದವು ಹೀಗಿದೆ: "ಅಪಾರಾಧಗಳು ಹೆಚ್ಚಾಗಿ ಕಂಡುಬರುವಾಗ ಧರ್ಮಶಾಸ್ತ್ರವು ಮಧ್ಯ ಬಂತು. ಆದರೆ ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ

ಪ್ರಬಲವಾಯಿತು [ರೋಮಾಪುರ 5:20], ದೇವರ ಕೃಪೆಯು ಹೆಚ್ಚಲಿ ಎಂದು ನಾವು ಇನ್ನೂ ಪಾಪದಲ್ಲಿ ಇರಬೇಕೋ'' (ರೋಮಾಪುರ 6:1). ಈ ಹೇಳಿಕೆನ್ನು ಮಾಡುವಲ್ಲಿ ಅವರ ಉದ್ದೇಶವು, ನಿಜವಾಗಿ ಅವರು ಹೆಚ್ಚು ಪಾಪ ಮಾಡಬೇಕೆಂದು ಅವನು ಸೂಚಿಸುತ್ತಿಲ್ಲ, ಆದರೆ ನಾವು ಕೃಪೆಯಿಂದಲೇ ರಕ್ಷಿಸಲ್ಪಟ್ಟೆವು ಹೊರತು ಧರ್ಮಶಾಸ್ತ್ರದಿಂದಲ್ಲ ಎಂಬ ಪೌಲನ ಒತ್ತಿ ಹೇಳುವಿಕೆಯನ್ನು ತೋರಿಸುವುದಕ್ಕಾಗಿಯೇ.

ಪೌಲನು ಅವರ ವಾದಕ್ಕೆ ಪ್ರತಿಕ್ರಯಿಸುತ್ತಾ ಅದರ ಫಲವಾಗಿ, ''ನಾವು ಪಾಪದಿಂದ ಬಿಡುಗಡೆ ಹೊಂದಿದವರಾದ ನಾನು ಅದರಲ್ಲಿ ಹೊಂದಿಕೊಳ್ಳುವುದಿಲ್ಲ ನಾವು ಇನ್ನು ಪಾಪದ ಪಾಲಿಗೆ ಸತ್ತವರಾಗಿದ್ದೇವೆ'' ಎನ್ನುತ್ತಾನೆ. ''ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ?'' (ರೋಮಾಪುರ 6:2).

ಪೌಲನ ವಾದದ ಇನ್ನೊಂದು ಉತ್ತರವು: ''ನೀವು ಹೇಳುವಂತೆ ಧರ್ಮಶಾಸ್ತ್ರಕ್ಕೆ ಅಧೀನರಲ್ಲ'' [ರೋಮಾಪುರ 6:14], ನಾವು ಪಾಪವನ್ನು ಅಲಕ್ಷಿಸುವ ಎಲ್ಲಾ ಜವಾಬ್ದಾರಿಗಳೊಂದಿಗೆ ನಾವು ಸ್ವತಂತ್ರ್ಯರಾಗಿದ್ದೇವೆ. ''ನಾವು ಕೃಪಾಧೀನರಾಗಿದ್ದೇವೆಂದು ಪಾಪವನ್ನು ಮಾಡ ಬಹುದೋ?'' (ರೋಮಾಪುರ 6:15). ಪೌಲನು ಅದಕ್ಕೆ ಪ್ರತಿಕ್ರಯಿಸುತ್ತಾ, ''ನಮ್ಮ ಸ್ವಾತಂತ್ರ್ಯವು ಹೊಣೆಗಾರಿಕೆಯಲ್ಲಿ ಒಳಗೊಂಡಿರುವ ಕಾರಣ, ನಾವು ಪಾಪಕ್ಕೆ ಒಳಗಾಗುವುದನ್ನು ಮುಂದುವರೆಸುವವರಾಗಿದ್ದೇವೆ, ನಾವು ಇನ್ನು ಮೇಲೆ ಸ್ವಾತಂತ್ರ್ಯರಲ್ಲ ಆದರೆ ಪಾಪಕ್ಕೆ ದಾಸ ರಾಗಿದ್ದೇವೆ'' ಎಂದು ಉತ್ತರಿಸುತ್ತಾನೆ.

ಹೀಗೆ ಈ ಅಧ್ಯಾಯದ ಪ್ರಧಾನವಾದ ಪ್ರಾಯೋಗಿಕವಾದ ಒತ್ತಿ ಹೇಳುವಿಕೆಯು ಎಂದರೆ ಕ್ರೈಸ್ತನು ಬದಲಾದ ಜೀವಿತವನ್ನು ನಡೆಸುವವನಾಗಿದ್ದಾನೆ. ಒಬ್ಬ ಕ್ರೈಸ್ತನು ಯಾಕೆ ಪಾಪವನ್ನು ಪಾಪಮಾಡಬಾರದೆಂಬುದಕ್ಕಾಗಿ ಮತ್ತು ನಾವು ಬದಲಾದ ಜೀವಿತವನ್ನು ಜೀವಿಸಲೇಬೇಕು ಎಂಬುದಕ್ಕೆ ಪೌಲನು ಅನೇಕ ಕಾರಣಗಳನ್ನು ಒದಗಿಸುವವನಾಗಿದ್ದಾನೆ: (1) ಕ್ರೈಸ್ತನಾದವು ಪಾಪಮಾಡಬಾರದು ಯಾಕೆಂದರೆ ಆತನು ಪಾಪದಿಂದ ಬಿಡುಗಡೆ ಹೊಂದಿದ್ದಾನೆ (ರೋಮಾಪುರ 6:2, 9-11). ನಾವು ದೋಷದಿಂದ, ಬೇಡಿಕೆಗಳಿಂದ, ಮತ್ತು ಪಾಪದ ಬಲದಿಂದ ಸ್ವತಂತ್ರ್ಯರಾಗಿದ್ದೇವೆ. ಖಚಿತವಾಗಿ ಹೀಗೆ ನಾವು ಇನ್ನೂ ಪಾಪದಲ್ಲಿ ಮುಂದುವರೆಯಲಾರೆವು ಮತ್ತು ಹಾಗೆಯೇ ದಾಸತ್ವದಲ್ಲಿ ಮರಳಲಾರೆವು. (2) ಕ್ರೈಸ್ತನು ಪಾಪದಲ್ಲಿ ಇರಲಾರನು ಯಾಕೆಂದರೆ ಆತನು ಹೊಸದಾದ ಜೀವಿತದಲ್ಲಿ ಜೀವಿಸುವವನಾಗಿದ್ದಾನೆ (ರೋಮಾಪುರ 6:4). ಬದಲಾವಣೆಯು ಆ ಸ್ಥಳವನ್ನು ಪಡೆದಿದೆ; ಆತನು ಮರುಹುಟ್ಟಿದವನಾಗಿರ ಬೇಕು. ಹೊಸ ಜೀವಿತವು ಉನ್ನತಮಟ್ಟಗಳನ್ನು ಅಪೇಕ್ಷಿಸುವುದಾಗಿದೆ. (3) ಕ್ರೈಸ್ತನು ಪಾಪ ಮಾಡಬಾರದು ಯಾಕೆಂದರೆ ಆತನು ದೇವರ ಸೇವಕನಾಗಿರುತ್ತಾನೆ ಹಾಗೂ ದೇವರ ದಾಸನಾಗಿರುತ್ತಾನೆ (ರೋಮಾಪುರ 6:18). ಆದಕಾರಣ ಆತನು ದೇವರನ್ನು ಸೇವಿಸುವ ಮತ್ತು ವಿಧೇಯನಾಗುವ ಋಣದಲ್ಲಿ ಇರುವವನಾಗಿರುತ್ತಾನೆ. (4) ಕ್ರೈಸ್ತನು ಪಾಪಮಾಡಬಾರದು ಯಾಕೆಂದರೆ ಆತನು ಪಾಪಮಾಡುವುದಾದರೆ ಆತನು ನಾಶಹೊಂದುವನು (ರೋಮಾಪುರ 6:21-23).

## ಮುಕ್ತಾಯ

ಹಾಗಾದರೆ ರೂಪಾಂತರವಾದ ಮನುಷ್ಯನು ಹೇಗೆ ಜೀವಿಸಬೇಕು? ಎರಡು ಕಾರಣಗಳು ಇಲ್ಲಿ ಅತ್ಯಗತ್ಯವಾಗಿವೆ:

*ಮೊದಲನೆಯದು,* ''ಹೀಗಿರುವುದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಅಳಗೊಡಿಸಿ ನೀವು ದೇಹದ ದುರಾಶೆಗಳಿದೆ ಒಳಪಡಬೇಡಿರಿ'' (ರೋಮಾಪುರ 6:12; ಹೋಲಿಸಿ 6:13). ಕ್ರೈಸ್ತರು ತನ್ನ ಜೀವಿತವನ್ನು ಯಾರು ಅಥವಾ ಯಾವುದು ನಿಯಂತ್ರಣದಲ್ಲಿ ಇಟ್ಟುಕೊಂಡಿದೆ ಎಂಬುದನ್ನು ಹೇಳುವ ಅಧಿಕಾರವನ್ನು ಹೊಂದಿರುತ್ತಾರೆ. ಆತನ

ಜವಾಬ್ದಾರಿಯೆಂದರೆ ಆತನು ಪಾಪದಿಂದ ನಿಯಂತ್ರಣಕ್ಕೊಳ ಪಡದಂತೆ ನೋಡಿಕೊಳ್ಳುವದೇ ಆಗಿದೆ: "ನನ್ನ-ದೇಹದ ಮೇಲೆ ಯಾರ ಅಥವಾ-ಯಾವುದರ ಆಳ್ವಿಕೆ ಇದೆ? ದೇವರು ನನ್ನನ್ನು ನಿರ್ದೇಶಿಸುತ್ತಿದ್ದಾನೋ? ಅಥವಾ ಪಾಪವು ನನ್ನ ಮೇಲೆ ಅಳ್ವಿಕೆ ನಡೆಸುತ್ತಿದೆಯಾ ಮತ್ತು ನನ್ನ ಕೃತ್ಯಗಳು ನನ್ನನ್ನು ಆಳುತ್ತಿವೆಯಾ?" ಎಂದು ನಿಮ್ಮನ್ನು ನೀವು ಗಂಭೀರವಾಗಿ, ಕಾಳಜೀಪೂರಕವಾಗಿ, ಪ್ರಜ್ಞಾಪೂರಕವಾಗಿ ಕೇಳಿಕೊಳ್ಳಿರಿ.

*ಎರಡನೆಯದಾಗಿ,* "ನಿಮ್ಮ ಅಂಗಗಳನ್ನು ದೇವರಿಗೆ ಒಪ್ಪಿಸಿಕೊಟ್ಟು ನಿಮ್ಮ ಅಂಗಗಳನ್ನು ನೀತಿಕೃತ್ಯಗಳನ್ನು ನಡೆಸುವ ಆತನ ಸಾಧನಗಳನ್ನಾಗಿ ಆತನಿಗೆ ಅರ್ಪಿಸಿರಿ" (ರೋಮಾಪುರ 6:13; 6:19 ಸಹ ನೋಡಿರಿ). ನಾವು ಪಾಪದ ಎಚ್ಚರಿಕೆಯ ಗಂಟೆಯನ್ನು ಯಾವಾಗಲೂ ಎದುರಿಸುವವರಾಗಿರುತ್ತೇವೆ. ಆದರೆ ಅಷ್ಟೇ ಸಾಕಾಗದು. ಗುಣಾತ್ಮಕವಾದ ನೆಲೆಯಲ್ಲಿ ನಾವು ನಮ್ಮನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಲೇಬೇಕು. "ನನ್ನ ಜೀವಿತವನ್ನು ತಗೋ ಮತ್ತು ಅದು ನಿನಗಾಗಿಯೇ" ಎಂಬ ಹಾಡಿನಂತೆ ಇದು ಸರಿಯಾಗಿ ಇರುವುದಾಗಿದೆ:

ನನ್ನ ಜೀವಿತವನ್ನು ತಗೋ ಮತ್ತು ಅದು ನಿನಗಾಗಿ
ಕರ್ತನೇ ಅದು ನಿನಗೆ ಮುಡಿಪಾಗಿದೆ;
ನನ್ನ ಕೈಗಳನ್ನು ನಿನ್ನವೇ ಮತ್ತು ಅವುಗಳನ್ನು ಆಡಿಸು
ಯತ್ಥೇಚ್ಛ ಪ್ರೀತಿಯಲ್ಲಿ.

ನನ್ನ ಚಿತ್ತವನ್ನು ತಗೋ ಮತ್ತು ಅದನ್ನು ನಿನ್ನದನ್ನಾಗಿ ಮಾಡಿಕೋ,
ಇನ್ನು ಮುಂದೆ ಅದು ನನ್ನದಲ್ಲ.
ನನ್ನ ಹೃದಯವನ್ನು ತಗೋ,
ಅದು ಆ ಅರಸನ ಸಿಂಹಾಸನದಲ್ಲಿರಲಿ.

ನನ್ನ ಪ್ರೀತಿಯನ್ನು ತಗೋ; ನನ್ನ ಕರ್ತನೇ, ನಾನು ಸುರಿಯುವೆ
ವೈಢೂರ್ಯವಿರುವ ಆ ಪಾದಗಳಲ್ಲಿ;
ನನ್ನನ್ನೇ ತಗೋ, ಮತ್ತು ನಾನು ಇರುವೆನು
ಎಲ್ಲವುಗಳನ್ನು ಅದಕ್ಕಾಗಿಯೇ, ಎಂದಿಗೂ ಇರುವೆ.

ಶ್ರೇಷ್ಟ ರೂಪಾಂತರವು, ಅದರ ಪರಿಣಾಮವು ಬದಲಾದ ಜೀವಿತವು ನಿತ್ಯಜೀವಿತದ ಅಂತಿಮವಾದ ಪರಿಣಾಮವಾಗಿದೆ. ರೋಮಾಪುರ 6:23 ಹೇಳುವುದೇನೆಂದರೆ, "ಪಾಪವು ಕೊಡುವ ಸಂಬಳ ಮರಣ ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ" ನಿತ್ಯಜೀವವು ಒಂದ ವರವಾಗಿದೆ; ಅದು ಕೃಪೆಯಿಂದ ಸಿಕ್ಕುವಂತದ್ದಾಗಿದೆ. ಹೇಗೋ, ಒಂದು ವೇಳೆ ಒಬ್ಬ ಕ್ರೈಸ್ತನು ತನ್ನ ಜೀವನವನ್ನು ಬದಲಾಯಿಸದೇ ಲೋಕದ ಹಿಂದೆ ಹೋಗುವದಾದರೆ ಅವನಿಗೆ ಸಿಕ್ಕುವದು ಮರಣ. (ನೋಡಿರಿ 2 ಪೇತ್ರ 2:20.)

"ನಿಮ್ಮ ಪೂರ್ವಸ್ವಭಾವದ" ಬಗೆಗೆ ಎಂದಾದರೂ ಬೇಸರಗೊಂಡಿದ್ದಿಯಾ ಬಹುಶಃ ನಿಮ್ಮನ್ನು ನೀವು ಸುಧಾರಿಸಿಕೊಳ್ಳಲು ಪ್ರಯತ್ನಿಸಿರಬಹುದು. ನೀವೇನಾದರೂ ಸ್ವ-ಸುಧಾರಣೆಯ ಪುಸ್ತಕವನ್ನೇನಾದರೂ ಪ್ರಯತ್ನಿಸಿದ್ದೀರಾ? "ಹೊಸ ಸ್ವರೂಪ"ವನ್ನು ಪ್ರಯೋಗಿಸಲು ಪ್ರಯತ್ನಪಟ್ಟಿದ್ದೀರಾ? ಒಳ್ಳೆಯದಾದ ಜೀವನಶೈಲಿಯು, ಪಥ್ಯಕ್ಕೂ, ವ್ಯಾಯಾಮಕ್ಕೂ ಒಳ್ಳೇಯದೇ? ಅಷ್ಟೇ ಅಲ್ಲದೇ, ದೈಹಿಕ ಬದಲಾವಣೆಯೂ ಕೂಡಾ?

"ಟಮ್ಮೀ ಟಕ್," "ಮೂಗಿನ ಕೆಲಸ," ಅಥವಾ "ಪೇಸಲಿಪ್ಟ," ಬದಲಾಗಿ ನಿಮಗೆ ಅವಶ್ಯವಾದದ್ದು ಮಾರ್ಪಾಟ ಆಗಿರಬೇಕು! "ನಿನ್ನ ಪೂರ್ವ ಸ್ವಭಾವ"ದಿಂದ ಹೊರಬನ್ನಿ ಮತ್ತು ಕ್ರಿಸ್ತನಲ್ಲಿ ಹೊಸ ಮನುಷ್ಯನಾಗು! ಯೇಸುವಿನಲ್ಲಿ ನಂಬಿಕೆಯಿಟ್ಟು, ನಿಮ್ಮ ಪಾಪಗಳಿಗೆ

ಪಶ್ಚಾತ್ತಾಪಪಡಿರಿ ಮತ್ತು ಪಾಪದ ಬಿಡುಗಡೆಗಾಗಿ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳ ಬೇಕು! ಆಗ ನೀವು ಮರಣಹೊಂದುವುದಕ್ಕಿಂತ ಜೀವಂತ ವಾಗಿದ್ದುಕೊಂಡು, ಪಾಪದ ದಾಸರಾಗಿರುವುದಕ್ಕಿಂತ ನೀತಿಯ ದಾಸರಾಗಿದ್ದುಕೊಂಡು, ಹೊಸದಾಗಿ ಹುಟ್ಟಿ ಹೊಸ ವ್ಯಕ್ತಿಯಾಗಿ ದೇವರ ಕುಟುಂಬದ ಹೊಸ ಮಗುವಾಗಿರುವಿರಿ. ಆಗ ನೀನು ನಿನ್ನ ಒಡೆಯನ ಅಶೋತ್ತರದಂತೆ ಆ ತರದ ಬದಲಾದ ಜೀವಿತದಲ್ಲಿ ನೀನು ಜೀವಿಸಬಹುದು ಮತ್ತು ನಿಮ್ಮ ಬಹುಮಾನವು ನಿತ್ಯಜೀವವೂ, ದೇವರೊಂದಿಗೆ ಎಂದೆಂದಿಗೂ ಪರಲೋಕದ ಅವಾಸವನ್ನು ಹೊಂದಿರುವುದೇ ಆಗಿದೆ!